



ಬಾವೋಬಾಬ್ ಮರದ ಹಣ್ಣುಗಳನ್ನು ಮಾರುತ್ತಿರುವ ಮೆಹಿಳೆ

(98 ಅಡಿ), ಅಗಾಧ ಸುತ್ತಳತೆ (36 ಅಡಿ) ಮತ್ತು ದೀರ್ಘಾಯುಷ್ಯದಿಂದ (3000 ವರ್ಷ) ಈ ಬಾವೋಬಾಬ್ ಮರಗಳು ವಿಶ್ವಪ್ರಸಿದ್ಧಿಯಾಗಿವೆ. ಈ ಮರದ ಕಾಂಡ ಒಂದು ಲಕ್ಷ ಲೀಟರ್ ನೀರನ್ನು ಹಿಡಿದಿಟ್ಟುಕೊಳ್ಳಬಲ್ಲ ಸಾಮರ್ಥ್ಯ ಹೊಂದಿದೆ. ರಾತ್ರಿ ವೇಳೆ ಅರಳುವ ಇದರ ಹೂಗಳ ಸುಗಂಧ, ತಂಪು ವಾತಾವರಣದಿಂದ ಹೊರಹೊಮ್ಮುವ ಮಣ್ಣಿನ ಘಮದೊಡನೆ ಬೆರೆತು ಆಹ್ಲಾದವನ್ನುಂಟು ಮಾಡುತ್ತವೆ.

'ಮಾಂಡು ಕಿ ಇಮ್ಲಿ' ಎನ್ನುವ ಉದ್ದುದ್ದವಿರುವ, ಎರಡೂ ಕೈಯಲ್ಲಿ ಹಿಡಿಯಬೇಕಾದ, ದೊಡ್ಡ ಗಾತ್ರದ ಬಾವೋಬಾಬ್ ಕಾಯಿಗಳನ್ನು ಒಡೆದಾಗ, ಬಿಳಿಯ ತಿರುಳನ್ನು ಹೊಂದಿರುವ ಬೀಜಗಳ ಸಮೂಹದಂತೆ, ಒಂದು ರೀತಿ ದೈತ್ಯ ಸೀತಾಫಲದಂತೆ ಕಂಡುಬರುತ್ತದೆ.

## 'ಮಾಂಡು ಕಿ ಇಮ್ಲಿ' ಮೂಲ

ಬಾವೋಬಾಬ್ ಮರಗಳು ಮಾಂಡುವಿಗೆ ಹೇಗೆ ಬಂದವು ಎಂಬುದರ ಬಗ್ಗೆ ಕುತೂಹಲ ವ್ಯಕ್ತಪಡಿಸಿದಾಗ, ಇಲ್ಲಿ ಮೂರ್ನಾಲ್ಕು ರೀತಿಯ ವಿವರಣೆಗಳು ಸಿಕ್ಕವು. ವಿಶೇಷ ಎಂದರೆ ಎಲ್ಲವೂ ಒಂದಕ್ಕಿಂತ ಒಂದು ರೋಚಕವಾಗಿವೆ.

ಮಾಂಡುವಿನ ಸುಂದರ ನಿರ್ಮಾಣಗಳಲ್ಲೊಂದಾದ ಹಿಂಡೋಲಾ ಮಹಲ್ (ಜೋಕಾಲಿ ಅರಮನೆ) ಅನ್ನು ಬಣ್ಣಿಸುತ್ತಿದ್ದ ಮಾರ್ಗದರ್ಶಿಯನ್ನು ಬಾವೋಬಾಬ್ ಬಗ್ಗೆ ಕೇಳಿದಾಗ, ಆತ ಅದನ್ನು ಖೊರಾಸಾನಿ ಇಮ್ಲಿ ಎಂದು ಕರೆದ. ಹೆಚ್ಚಿನ ವಿವರಣೆ ಕೇಳಿದಾಗ, 'ಮಧ್ಯ ಏಷ್ಯಾ ಭಾಗವನ್ನು ಹಿಂದೆ ಖೊರಾಸಾನ್ ಎಂದು